ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಬದಲಾಯಿಸಿದೆ. ಬಾಕಿ ಉಳಿದ 22 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಕ್ರಮ ಜರುಗಿಸುತ್ತಿದೆ. ಸ್ವಲ್ಪ ಹೆಚ್ಚಿನ ಸಂಖ್ಯೆಗಳಲ್ಲಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಂಡಿದ್ದರಿಂದ, ಬದಲಿಕೆಯ ಕಾರ್ಯದಲ್ಲಿ ಸ್ವಲ್ಪ ವಿಳಂಬ ಉಂಟಾಗುತ್ತಿರುವುದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಗಮನಕ್ಕೆ ಬಂದಿರುತ್ತದೆ.

ಊ) ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಕಾರ್ಯವನ್ನು ಚುರುಕುಗೊಳಿಸುವ ಸಲುವಾಗಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ವಿತರಣಾ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳನ್ನು ಹೆಚ್ಚಿಸಿರುತ್ತದೆ. ಇತ್ತೀಚಿಗೆ ಇನ್ನೂ ಮೂರು ಹೊಸ ದುರಸ್ತಿ ಕೇಂದ್ರಗಳು ಕಾರ್ಯರಂಭ ಮಾಡುತ್ತಿರುವುದರಿಂದ ಈಗ ಒಟ್ಟು 10 ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದರಿಂದ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿಗೊಂಡು, ಬದಲಾವಣೆ ಕಾರ್ಯಕ್ಕೆ ಲಭ್ಯವಾಗುತ್ತಲಿದೆ. ಪ್ರತಿ ಕಾರ್ಯ ಮತ್ತು ಪಾಲನಾ ವಿಭಾಗಕ್ಕೊಂದು ಟ್ರಾನ್ಸ್‌ಫಾರ್ಮರ್ ರಿಪೇರಿ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಪರಿಶೀಲಿಸುತ್ತಿದೆ.

5283(6176) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುನವಳ್ಳಿ ಕೆ.ಸಿ.ಎಫ್ ಕಾಮಗಾರಿಯಲ್ಲಿ ಎಮ್–29 ಪ್ಯಾಕೇಜಿನಡಿ ಪ್ರಮುಖ್ಯವಾಗಿ 5 ಸೇತುವೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬೆನಕಟ್ಟಿ ಹತ್ತಿರ ತಿರುವಿನಲ್ಲಿ ಇಕ್ಕಟ್ಟಾದ ಸೇತುವೆ ಮತ್ತು ಶಿಂಧೋಗಿ ಹತ್ತಿರ ಸೇತುವೆ)

ಆ) ಬಂದಿದ್ದಲ್ಲಿ, ಈ ರಸ್ತೆಯಲ್ಲಿ ವಾಹನಗಳು ಸುಗಮವಾಗಿ ಸಂಚರಿಸಲು ಪ್ರಮುಖವಾದ 5 ಸೇತುವೆಗಳನ್ನು ನಿರ್ಮಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ;

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಕರ್ನಾಟದ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಯರಗಟ್ಟಿಯಿಂದ ಹುಲಿಕಟ್ಟೆವರೆಗೆ 29.60 ಕಿ.ಮೀ. ಉದ್ದದ ರಸ್ತೆಯನ್ನು ಪುನಃಶ್ಚೇತನಗೊಳಿಸುವ ಕಾರ್ಯವನ್ನು ಎಮ್–29 ಪ್ಯಾಕೇಜ್ ಅಡಿಯಲ್ಲಿ ಕೈಗೊಳ್ಳಲಾಗಿದೆ. ಈ ರಸ್ತೆಯಲ್ಲಿರುವ 5 ಸೇತುವೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಎಮ್–29 ಪ್ಯಾಕೇಜ್‌ನ ಅಡಿಯಲ್ಲಿ ರಸ್ತೆಯನ್ನು ಪುನಃಶ್ಚೇತನಗೊಳಿಸುವುದಕ್ಕೆ ಮಾತ್ರ ಸೀಮಿತವಾಗಿದ್ದುದರಿಂದ, ವಿಶ್ವ ಬ್ಯಾಂಕ್ ನಿರೂಪಣಾ ನೀತಿಯಂತೆ ಸದರಿ 5 ಸೇತುವೆಗಳು ಉತ್ತಮ ಸ್ಥಿತಿಯಲ್ಲಿರುವುದರಿಂದ, ಅವುಗಳ ನಿರ್ವಹಣೆ ಮಾತ್ರ ಕೈಗೊಂಡಿದ್ದು, ಹೊಸ ಸೇತುವೆಗಳ ನಿರ್ಮಾಣದ ಪ್ರಸ್ತಾವನೆ ಇರುವುದಿಲ್ಲ.